**<u>ದಿನಾಂಕ : 25-03-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 4 ರಿಂದ 6 ನೇ ಪ್ರತಿವಾದಿ ಪರ ವಕೀಲರಿಂದ</u>**

ನನ್ನ ಜನ್ಮ ದಿಃ16.05.1985. ನಾನು ಬಿ.ಟೆಕ್. ಪದವೀದರ. ನಾನು ಒಂದನೇ 10 ನೇ ತರಗತಿವರೆಗೆ ಆಂದ್ರಪ್ರದೇಶ ರಾಜ್ಯದಲ್ಲಿ ವಿದ್ಯಾಬ್ಯಾಸ ಮಾಡಿರುತ್ತೇನೆ. ಈಗ ನಾನು 2007 ರಿಂದ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೇನೆ. ನಾನು ಈಗ ಹೈದರಾಬಾದ್ ನಲ್ಲಿ 2019 ಡಿಸೆಂಬರ್ ತಿಂಗಳಿಂದ ಡೈನಮೊ ಇನ್ಫೊ ಟೆಕ್ನಾಲಜಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ನಿಪಿ.1 ರಲ್ಲಿ ತೋರಿಸಿರುವ ವಿಳಾಸದಲ್ಲಿ ಈಗ ವಾಸವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರೆದು ಅದು ನಮ್ಮ ಸ್ವಂತ ಮನೆ ಎಂದು ನುಡಿಯುತ್ತಾರೆ. ಸದರಿ ಮನೆ ನನ್ನ ಸ್ವಂತ ಮನೆಯಲ್ಲ ಎಂದರೆ ಸರಿಯಲ್ಲ. ವಾದಿಗೆ ಆನಂದರತ್ನಂ ಎಂಬ ಅಣ್ಣ ಇದ್ದಾರೆ ಎಂದರೆ ಸರಿ. ವಾದಿ ಹಾಗೂ ಅವರ ತಂಗಿಯಂದಿರು ಆನಂದರತ್ನಂರವರ ವಿರುದ್ದ ವಿಭಾಗ ಕೋರಿ ದಾವೆ ಸಲ್ಲಿಸಿದ್ದು ಸದರಿ ದಾವೆ ಡಿಕ್ರಿಯಾಗಿದೆ ಎಂದರೆ ಸರಿ. ಸದರಿ ತೀರ್ಪು ಮತ್ತು ಡಿಕ್ರಿಯ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಹ ಸಲ್ಲಿಸಿದ್ದು ಅದು ಇತ್ಯರ್ಥವಾಗಿದೆ ಎಂದರೆ ಸರಿ. ಸದರಿ ಮೇಲ್ಮನವಿ ಇತ್ಯರ್ಥ ಆಗುವ ಸಮಯದಲ್ಲಿ ವಾದಿ ನ್ಯಾಯಾಲಯಕ್ಕೆ ಹಾಜರಾಗಿ ಅವರ ವಕೀಲರಿಗೆ ಮಾಹಿತಿ ಕೊಟ್ಟಿದ್ದಾರೆ ಎಂದರೆ ಸರಿ. ಆದಕಾರಣ ವಾದಿಗೆ ಈ ದಾವೆಯಲ್ಲಿ ಸ್ವತಃ ಹಾಜರಾಗಿ ಸಾಕ್ಷಿ ನುಡಿಯಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿರುವ ದಾವಾ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇದೆ. ದಾವಾ ಆಸ್ತಿಗೆ ಸಂಬಂದಪಟ್ಟ ಮೂಲ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿ ಮೂಲತಃ 1 ನೇ ಪ್ರತಿವಾದಿಗೆ ಸೇರಿತ್ತು. ಅವರು ಪ್ರಮಿಳರವರ ಕುಟುಂಬದಲ್ಲಿ ತೊಂದರೆ ಇದ್ದ ಕಾರಣ ಅವರ ಹೆಸರಿಗೆ ರಕ್ಷಣೆಗಾಗಿ ಕೇವಲ ಪತ್ರ ಬರೆದುಕೊಟ್ಟಿದ್ದು ಅವರಿಂದ ಯಾವುದೇ ಪ್ರತಿಫಲ ಪಡೆದುಕೊಂಡಿರುವುದಿಲ್ಲ. ನನ್ನ ದೊಡ್ಡಮ್ಮನ ಜೊತೆ ನಾನು 2007 ರಿಂದ 2011 ರತನಕ ವಾಸವಿದ್ದು ಆ ಸಮಯದಲ್ಲಿ ಸದರಿ ವಿಷಯವನ್ನು ಅವರು ನನಗೆ ತಿಳಿಸಿರುತ್ತಾರೆ. ಪ್ರಮಿಳರವರಿಗೆ ಯಾವುದೇ ತೊಂದರೆ ಇರಲಿಲ್ಲ ಅವರು ಹಣ ಕೊಟ್ಟು ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರಮಿಳ ರವರ ಗಂಡ ಸರ್ಕಾರಿ ನೌಕರಿಯಲ್ಲಿ

This is a True Copy of the Court Records Online. Authenticated @ districts.ecourtsindia.com/cnr/KABR020020172015/truecopy/order-4.pdf

ಆಂಧ್ರಪ್ರದೇಶದಲ್ಲಿದ್ದಾರೆ ಎಂದರೆ ಸರಿ. ಅವರ ಗಂಡ ಸಂಪಾದನೆ ಮಾಡಿದ ಹಣದಿಂದ ದಾವಾ ಆಸ್ತಿಯನ್ನು ಅವರ ಹೆಂಡತಿ ಪ್ರಮಿಳ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನಿಪಿ.4 ವಿಲ್ ನ್ನು ಯಾವ ಸ್ಥಳದಲ್ಲಿ ತಯಾರು ಮಾಡಲಾಗಿದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಸದರಿ ವಿಲ್ ನಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿರುವವರು ನನ್ನ ತಂದೆ ಎಂ.ವೆಂಕಟಾಚಲಂ ಮತ್ತು ಇನ್ನೊಬ್ಬ ವ್ಯಕ್ತಿ ದಾಸಬಾಲ್ ಅವರು ನಮ್ಮ ಸಂಬಂಧಿ. ನಿಪಿ.4 ನ್ನು ವಿಲ್ ನ್ನು ಯಾರು ಬರೆದಿರುತ್ತಾರೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ನಿಪಿ.4 ವಿಲ್ ನಲ್ಲಿರುವ ಸಹಿ ಪ್ರಮಿಳಾರವರ ಸಹಿ ಅಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ವಾದಿ, 1 ನೇ ಪ್ರತಿವಾದಿ ಮತ್ತು ನನ್ನ ತಂದೆ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಖರೀದಿ ಮಾಡಿದ ದಿನದಿಂದ ಪ್ರಮಿಳರವರ ಸ್ವಾಧೀನದಲ್ಲಿದ್ದು ಅವರು ಮರಣದ ನಂತರ ಅವರ ಗಂಡ ಮತ್ತು ಮಕ್ಕಳು ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುರೆದು ಪ್ರಮಿಳಾರವರ ಜೀವನಕ್ಕೆ ಬದ್ರತೆಯಾಗಿ ದಾವಾ ಆಸ್ತಿಯನ್ನು ಅವರ ಹೆಸರಿಗೆ ದಾಖಲೆ ಮಾಡಿಕೊಡಲಾಗಿದೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ವಾದಿ ದಾವಾ ಆಸ್ತಿ ತನಗೆ ಸೇರಿದ್ದೆಂದು ಸಲ್ಲಿಸಿರುತ್ತಾರೆ. ಈ ದಾವೆಯನ್ನು ವಾದಿ ಯಾರ ಕಾರಣಕ್ಕೆ ಮತ್ತು ಏನು ಪರಿಹಾರ ಕೋರಿ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖಾತೆ ಮೊದಲಿಗೆ ಪ್ರಮಿಳ ಹೆಸರಿನಲ್ಲಿದ್ದು ಅವರ ಮರಣದ ನಂತರ ಅವರ ಗಂಡ ಮತ್ತು ಮಕ್ಕಳ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಪ್ರಮಿಳ ಹೆಸರಿನಲ್ಲಿ ಇರಬಹುದು ಎಂದು ನುಡಿಯುತ್ತಾರೆ. ವಿಲ್ ನ ಆಧಾರದ ಮೇಲೆ 1 ನೇ ಪ್ರತಿವಾದಿ ವಾದಿ ಹೆಸರಿಗೆ ದಾವಾ ಆಸ್ತಿಯನ್ನು ದಾನಪತ್ರದ ಮೂಲಕ ಕೊಟ್ಟಿರುವ ಬಗ್ಗೆ ಈ ದಾವೆಯಲ್ಲಿ ಹೇಳಿರುತ್ತಾರೆ ಎಂದರೆ ಸರಿ. ದಾನಪತ್ರ ವಾದಿ ಹೆಸರಿಗೆ ಆಗುವ ಸಮಯದಲ್ಲಿ ಏನೆಲ್ಲಾ ನಡೆದಿದೆ ಎಂದು ನನಗೆ ಮಾಹಿತಿ ಇದೆ. ದಾನಪತ್ರ ನೊಂದಾವಣೆ ಆಗುವ ದಿನ ನಾನು ಉಪನೊಂದಾವಣ ಕಚೇರಿಗೆ ಹೋಗಿರಲಿಲ್ಲ.ಈ ದಾವೆ ಹಾಕುವ ಮೊದಲು ದಾನಪತ್ರವನ್ನು ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಜಿಪಿಎ ಪಡೆದುಕೊಂಡ ನಂತರ ನೋಡಿದ್ದೇನೆ ಎಂದು ಉತ್ತರಿಸಿರುತ್ತಾರೆ. ದಾನಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವವರಲ್ಲಿ ವಾದಿ ಗಂಡ ಎಸ್.ಹಿಂಬನಾದನ್ ಮಾತ್ರ ನನಗೆ ಗೊತ್ತಿದ್ದು ಮತ್ತೊಬ್ಬ ಸಾಕ್ಷಿದಾರ ಯಾರು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ವಾದಿ ಹೆಸರಿಗೆ ದಾನಪತ್ರ ಬರೆದುಕೊಟ್ಟ ಸಮಯಲ್ಲಿ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಏನೆಲ್ಲಾ

This is a True Copy of the Court Records Online. Authenticated @ districts.ecourtsindia.com/cnr/KABR020020172015/truecopy/order-4.pdf
www.ecourtsindia.com

ದಾಖಲಾತಿಗಳನ್ನು ಅವರಿಗೆ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ವಾದಿಯ ಗಂಡ ಸೇರಿ ದಾವಾ ಆಸ್ತಿಯನ್ನು ಕಬಳಿಸಲು ವಾದಿ ಹೆಸರಿಗೆ ದಾನಪತ್ರವನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ವಾದಿ ಹೆಸರಿಗೆ ಯಾವುದೇ ದಾನಪತ್ರ ಬರೆದುಕೊಟ್ಟಿಲ್ಲ ಹಾಗೂ ಉಪನೊಂದಾವಣ ಕಚೇರಿಗೆ ಎಂದರೆ ಸರಿಯಲ್ಲ. ನಿಪಿ.4 ವಿಲ್ ನ್ನು 1 ನೇ ಪ್ರತಿವಾದಿಗೆ ಹೆಸರಿಗೆ ಬರೆದುಕೊಟ್ಟಿಲ್ಲ ಅದನ್ನು ಈ ದಾವೆಗಾಗಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದಿ ದಾವಾ ಆಸ್ತಿಯನ್ನು ಕಬಳಿಸಲು ಈ ಸುಳ್ಳು ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ. ಪ್ರಮಿಳರವರ ಗಂಡ ಮತ್ತು ಮಕ್ಕಳ ಹೆರಿಗೆ ದಾವಾ ಆಸ್ತಿ ಖಾತೆ ಆಗುವ ಸಮಯದಲ್ಲಿ ವಾದಿ ಅಥವಾ 1 ನೇ ಪ್ರತಿವಾದಿ ತಕರಾರು ಸಲ್ಲಿಸಿರುವ ಬಗ್ಗೆ ನನಗೆ ನೆನಪಿಲ್ಲ. ಹಾಗೇ ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿ. ಈ ದಾವೆ ಹಾಕುವ ಮೊದಲು ಅಥವಾ ತದನಂತರ ದಾವಾ ಆಸ್ತಿಯ ಖಾತೆ ಯಾರ ಹೆಸರಿನಲ್ಲಿ ಇದೆ ಎಂದು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಪ್ರಮಿಳರವರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಪ್ರಮಿಳಾರವರ ಹೆಸರಿನಲ್ಲಿ ದಾವಾ ಆಸ್ತಿಯ ಖಾತೆ ಇದ್ದ ಬಗ್ಗೆ ನಮಗೆ 2014 ರಲ್ಲಿ ತಿಳಿದುಬಂದಿರುತ್ತದೆ. ಹಾಗೇ ತಿಳಿದ ನಂತರ ವಾದಿ ದಾನಪತ್ರದ ಆಧಾರದ ಮೇಲೆ ಖಾತೆ ಮಾಡಿಸಿಕೊಳ್ಳಲು ಬಿಬಿಎಂಪಿ ಕಚೇರಿಗೆ ಅರ್ಜಿ ಸಲ್ಲಿಸಿದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ನನಗೆ ಖಚಿತ ಮಾಹಿತಿ ಇಲ್ಲ. ವಾದಿ ಖಾತೆ ಮಾಡಿಸಿಕೊಳ್ಳಲು ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಖಚಿತ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಪ್ರಮಿಳ ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ಸುತ್ತಲೂ ಕಾಂಪೌಂಡ್ ಗೋಡೆ ಹಾಕಿದ್ದಾರೆ ಎಂದರೆ ಸರಿಯಲ್ಲ. ನಾನು ಸಾಕ್ಷಿ ನುಡಿಯುವ ಮೊದಲು ವಾದ ಪತ್ರವನ್ನು ಓದಿ ತಿಳಿದುಕೊಂಡಿರುವುದಿಲ್ಲ. ಈಗ ನೋಡಿದ ಪೋಟೋಗಳಲ್ಲಿ ಕಾಣುವ ವ್ಯಕ್ತಿ ಪ್ರಮಿಳಾ ಎಂದರೆ ಸರಿ ಸದರಿ ಪೋಟೋಗಳನ್ನು ಸಾಕ್ಷಿ ನೋಡಿ ಒಪ್ಪಿ **ಗುರುತಿಸಿದ್ದು ನಿಡಿ.1 ಮತ್ತು 2 ಎಂದು** ಗುರುತಿಸಲಾಯಿತು. ಸದರಿ ಪೋಟೋಗಳಲ್ಲಿ ದಾವಾ ಆಸ್ತಿಯ ಸುತ್ತಲೂ ಕಾಂಪೌಂಡ್ ಗೋಡೆ ಇರುವ ಬಗ್ಗೆ ಕಾಣುತ್ತದೆ ಎಂದರೆ ಸರಿ.

**ಮುಂದುವಾವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.

7ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,

This is a True Copy of the Court Records Online. Authenticated @ districts.ecourtsindia.com/cnr/KABR020020172015/truecopy/order-4.pdf

www.ecourtsindia.com

ಬೆಂ. ಗ್ರಾಮಾಂತರ ಜಿಲ್ಲೆ, ಬೆಂಗಳೂರು.

www.ecourtsindia.com
www.ecourtsindia.com
www.ecourtsindia.com
www.ecourtsindia.com
www.ecourtsindia.com
www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KABR020020172015/truecopy/order-4.pdf